




# ಮೇರು ಪರ್ವತದ ಮೇಲೆ ಜೈನ ಮಂದಿರ

ಜೈನ ಮಂದಿರದ ಬಳಿಯೇ ಪುರಾತನ ಚಾಮುಂಡಾ ಮಂದಿರವಿದೆ. ಎದುರಿಗೆ ಸಿಮೆಂಟಿನಿಂದ ನಿರ್ಮಿಸಲಾದ ಸಿಂಹಾಸನ. ಚಾಮುಂಡಾಗೆ ಬಲಿ ನೀಡುತ್ತಿದ್ದಾಗ ಅರಸ ಈ ಸಿಂಹಾಸನದಲ್ಲಿ ಆಸೀನನಾಗುತ್ತಿದ್ದನಂತೆ. ಈಗಲೂ ಇಲ್ಲಿ ನಿತ್ಯ ಬಲಿ ಇದೆ. ಹಿಂದೆ ಕೋಣಗಳ ಬಲಿ ನೀಡುತ್ತಿದ್ದರೆ, ಈಗ ಟಗರುಗಳ ಬಲಿ ನೀಡುತ್ತಿದ್ದಾರೆ.

■ ಚಿತ್ರ– ಲೇಖನ:
**ಇಂದಿರಾ ಹೆಗ್ಗಡೆ**





ಜೈಸಲ್ಮೇರ್ ಕೋಟೆ ಇರುವುದು ಮೇರು ಪರ್ವತದ ಮೇಲೆ. ‘ಈ ಕೋಟೆಯ ಒಳಗೆ ಇರುವ ಸುಂದರ ಜೈನ ಮಂದಿರ ಮುಚ್ಚುವ ವೇಳೆಯಾಗುತ್ತಿದೆ’ ಎಂದು ನಾವು ಅಮರ್ ಸಾಗರ್ ಅರಮನೆ ನೋಡದೆ ಅಲ್ಲಿಗೆ ಧಾವಿಸಿದ್ದೆವು. ಮೇರು ಪರ್ವತದ ಮೇಲೇರಿ, ಕೊನೆಗೂ ಜೈನ ಮಂದಿರದ ಒಳಹೋದಾಗ ಗಡಿಬಿಡಿ–ಯಲ್ಲಿ ಧಾವಿಸಿ ಬಂದದ್ದಕ್ಕೆ ಸಾರ್ಥಕ ಅನ್ನಿಸಿತು.

ಮಹಡಿ ಮೆಟ್ಟಲು ಹತ್ತಿ ಗರ್ಭಗುಡಿಗೆ ಹೋಗಬೇಕು. ಮಧ್ಯದ ಗರ್ಭ–ಗುಡಿಯಲ್ಲಿ ನಾಲ್ಕು ದಿಕ್ಕಿಗೂ ಮುಖ ಮಾಡಿ ಕುಳಿತ ಮಹಾವೀರರ ಸೌಮ್ಯ ಮೂರ್ತಿ ಇದೆ. ಗರ್ಭಗುಡಿಯ ಸುತ್ತಲೂ ತೀರ್ಥಂಕರರ ಪ್ರತಿಮೆಗಳಿವೆ. ಹಳದಿ ಶಿಲೆಗಳಲ್ಲಿ ನಿರ್ಮಿಸಿದ ಈ ಪ್ರತಿಮೆಗಳು ಬಂಗಾರದ ಮೆರುಗಿನಿಂದ ಶೋಭಿಸುತ್ತಿವೆ. ಇಲ್ಲಿ ಒಟ್ಟು 6000ಕ್ಕಿಂತಲೂ ಅಧಿಕ ಪ್ರತಿಮೆಗಳಿವೆ ಎಂದ ನಮ್ಮ ಗೈಡ್.

ಗೋಡೆಗಳ ಮೇಲೆ ಇರುವ ಭಿತ್ತಿ ಚಿತ್ರಗಳು ಅಬು ಪರ್ವತದ ದಿಲ್‌ವಾರಾ ಮಂದಿರವನ್ನು ನೆನಪಿಸುತ್ತದೆ. ಈ ಮಂದಿರದೊಳಗೆ ಕೃಷ್ಣ, ಗಣಪತಿ ಎಲ್ಲರೂ ಇದ್ದಾರೆ. ವೈವಿಧ್ಯಮಯ ನೃತ್ಯಭಂಗಿಯ ವಿಗ್ರಹಗಳು ಕಂಬಗಳಲ್ಲಿವೆ. ಕೆಂಪು ಶಿಲೆಯ ಈ ಜೈನ ಮಂದಿರದ ಕಲೆಯ ಬಲೆಯು ಸುಂದರ ಚಿತ್ರದಂತೆ ಮೂಡಿದೆ. ಗುಡಿಯು ಎತ್ತರದ ಜಗತಿಯನ್ನು ಹೊಂದಿದೆ. ಇವೆಲ್ಲ 14–15ನೆಯ ಶತಮಾನದವು ಎನ್ನುತ್ತದೆ ಇಲ್ಲಿಯ ಮಾಹಿತಿ. ಇಲ್ಲಿಯ ಕ್ಷೇತ್ರಪಾಲನನ್ನು ಸ್ಥಳೀಯವಾಗಿ ಭೈರೂಜಿ ಎನ್ನುತ್ತಾರೆ.

ಜೈನ ಮಂದಿರದ ಬಳಿ ಚಾಮುಂಡಾ ಮಂದಿರ ಇದೆ. ಇದು ಮಹಳ ಪುರಾತನ ಮಂದಿರ. ಇದರ ಅಧಿಷ್ಠಾನವೂ ಎರಡಾಳು ಎತ್ತರ ಇದೆ. ಎದುರಿಗೆ ಸಿಮೆಂಟಿನಿಂದ ನಿರ್ಮಿಸಲಾದ ಸಿಂಹಾಸನ ಇದೆ. ಚಾಮುಂಡಾಗೆ ಬಲಿ ನೀಡುತ್ತಿದ್ದಾಗ ಅರಸ ಈ ಸಿಂಹಾಸನದಲ್ಲಿ ಆಸೀನನಾಗಿರುತ್ತಿದ್ದನಂತೆ. ಈಗಲೂ ನಿತ್ಯ ಬಲಿ ಇದೆ. ಹಿಂದೆ ಕೋಣಗಳ ಬಲಿ ನೀಡುತ್ತಿದ್ದರು. ಇತ್ತೀಚಿನ ವರ್ಷ–